
# ಬಯಲು ಹೆಜ್ಜೆ

ಡಾ. ಕೆ.ಆರ್. ದುರ್ಗಾದಾಸ್ ಅವರ ಅಭಿನಂದನ ಗ್ರಂಥ



ಸಂಪಾದಕರು

ಡಾ. ತಿಪ್ಪೇಸ್ವಾಮಿ ಡಿ.ಎಸ್.

ಡಾ. ಗಿರೀಶ ಪಿ ದೇಸೂರ

# ಬಯಲು ಹೆಜ್ಜೆ

ಸಂಪಾದಕರು

**ಡಾ. ಡಿ.ಎಸ್. ತಿಪ್ಪೇಸ್ವಾಮಿ**

**ಡಾ. ಗಿರೀಶ ಪಿ. ದೇಸೂರ**

ಪ್ರಕಾಶಕರು

**ರಾಜ್ ಪ್ರಕಾಶನ**

ನಂ. ವೈ.ಎನ್. - 01, ಯಶೋಧರಾನಗರ,
ಬೋಗಾಧಿ 2ನೇ ಹಂತ, ಮೈಸೂರು - 570 026
ಮೊಬೈಲ್ - 94481—44796
Email:raj1212sid@gmail.com

BAYALU HEJJE : Edited by Dr. D.S. Thippeswamy & Dr. Girish P. Desura, Published by : RAJ PRAKASHANA, No. YN-01, Yashodharanagara, Bogadi II Stage, Mysore - 570 026., Mobile : 9448144796.

ಹಕ್ಕುಗಳು : ಡಿ. ಆದಿತ್ಯ

ಮೊದಲನೆಯ ಮುದ್ರಣ : ೨೦೨೦

ಪುಟಗಳು : (XXXVIII + 418) = **456**

**ಬೆಲೆ : 350 ರೂಪಾಯಿಗಳು**

ಮುಖಪುಟ : ಕೆ. ಪ್ರಭಾಕರ

ಮುದ್ರಕರು : ಗಾಯತ್ರಿ ಪ್ರಿಂಟರ್ಸ್, ಮೈಸೂರು.

# ಸಂಪಾದನಾ ಕೃತಿಗಳು

—ಡಾ. ಡಿ.ಎಸ್. ತಿಪ್ಪೇಸ್ವಾಮಿ

ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಬಯಲಾಟ ಕಥೆಗಳು ಇದೊಂದು ದೃಶ್ಯಕಲೆ. ಅಭಿನಯದ ಮೂಲಕ ಸಾಗುವ ಕಲೆ ಇದಾದ್ದರಿಂದ ನೋಡಿದಾಗ ಮಾತ್ರವೇ ಅದರ ಅನುಭವ ವೇದ್ಯ. ಉಳಿದ ಸಾಹಿತ್ಯ ಪ್ರಕಾರದಂತೆ ಕೇವಲ ಕೇಳಿ ಹಾಗೂ ನೋಡಿ ತಿಳಿಯುವಂತಹದ್ದು. ಗದ್ಯ–ಪದ್ಯಗಳಿಂದ ಕೂಡಿದ ಮಿಶ್ರಸಾಹಿತ್ಯ ಪ್ರಕಾರ ಇದಾಗಿದೆ. ಬಯಲಿನಲ್ಲಿ ಆಡುವ ಆಟವಾದ್ದರಿಂದ 'ಬಯಲಾಟ' ಎನ್ನುವ ಹೆಸರು ಇದಕ್ಕಿದೆ. ಹಣತೆತ್ತು ಟಿಕೀಟು ಪಡೆದು ನೋಡುವ ಅವಶ್ಯಕತೆಯಿಲ್ಲ. ಬಯಲಿನಲ್ಲಿ ಕುಳಿತು ಪುಕ್ಕಟೆಯಾಗಿ ನೋಡಬಹುದು. ಬಯಲಿಗೆ ಬರುವುದಕ್ಕಿಂತ ಪೂರ್ವದಲ್ಲಿ ಆಟಗಳು ಗುಡಿಗಳಲ್ಲಿಯೇ ಹೆಚ್ಚು ಅಭಿನಯಿಸಲ್ಪಡುತ್ತಿದ್ದವು. ಭಾರತೀಯ ಸಂಸ್ಕೃತಿಯಲ್ಲಿ ದೇವಾಲಯಗಳು ಬಹು ಪ್ರಮುಖ ಪಾತ್ರವಹಿಸಿವೆ. ಈಗಲೂ ಅನೇಕ ಹಳ್ಳಿಗಳ ಪಾಠಶಾಲೆಗಳು ಗುಡಿಗಳಲ್ಲಿಯೇ ನಡೆಯುತ್ತಿರುವುದು ಇದಕ್ಕೆ ನಿದರ್ಶನ. ಜನಪದರ ನೀತಿ–ತತ್ವ, ಧರ್ಮ, ಶಿಕ್ಷಣ, ಮನರಂಜನೆಗಳೆಲ್ಲಾ ದೇವಾಲಯಗಳ ಮೂಲಕವೇ ಅರಳಿರುವುದೊಂದು ಗ್ರಾಮೀಣ ಸಂಸ್ಕೃತಿಯ ಹಿರಿಮೆಯಾಗಿದೆ. ಈಗಲೂ ಪಾತ್ರಧಾರಿಗಳು ಆಟವಾಡುವ ಪೂರ್ವದಲ್ಲಿ ಗ್ರಾಮದೇವತೆಗಳನ್ನೆಲ್ಲಾ ಪೂಜಿಸಿ, ನಮಸ್ಕರಿಸಿಯೇ ಅಟ್ಟವೇರುವಲ್ಲಿ, ಆಟದ ಕೊನೆಯಲ್ಲಿ ಗುಡಿಯನ್ನು ಹೊಕ್ಕು ಮನೆಗೆ ಹೋಗುವಲ್ಲಿ ಈ ಮಾತು ಸ್ಪಷ್ಟವಾಗುತ್ತದೆ. ಗುಡಿಯೇ ಮೊದಲು ರಂಗಸ್ಥಲವಾಗಿದ್ದು ಬರಬರುತ್ತ ಅದು ಪ್ರೇಕ್ಷಕವರ್ಗಕ್ಕೆ ಕಿರಿದೆನಿಸಿದಾಗ ಬಯಲಿಗೆ ಬಂದು ಬಯಲಾಟವಾಗಿರುವಲ್ಲಿ ಸಂದೇಹ ಇಲ್ಲ. ಹೀಗಾಗಿ ಬಯಲಾಟದ ಕಥೆಗಳು ಅಂತರಾಳದಲ್ಲಿ ಧಾರ್ಮಿಕ

ಮನೋಭಾವನೆ ತುಂಬಿದಂತಿದೆ. ಜನಪದ ರಂಗಭೂಮಿ ಧಾರ್ಮಿಕ ಜಾಗ್ರತ ಸ್ಥಳವಾಗಿ ದೇವಾಲಯಗಳ ಮೂಲಕ ಬೆಳಗಿದಂತಿದೆ. ಕಲಾಕಾರ ಮಾಡಿದ್ದೆಲ್ಲ ಆಟವಾಗಿರದೆ ದೇವರಿಗೆ ಮಾಡುವ ಒಂದು ಪೂಜೆ. ಪರಮಾತ್ಮನನ್ನು ತೃಪ್ತಿಗೊಳಿಸುವ ಒಂದು ಸಾಧನ ಎಂಬ ಭಾವನೆ ಇದರಲ್ಲಿದೆ.

'ನಾಟ್ಯಂ ಭಿನ್ನರುಚೇರ್ಜನಸ್ಯ ಬಹುದಾಪ್ಯೇಕಂ ಸಮಾರಾಧನಂ' ಎನ್ನುವ ಮಾತು ಬಯಲಾಟಗಳಿಗೆ ತುಂಬ ಅನ್ವಯಿಸುವಂತಹುದು. ಭಿನ್ನ ಅಭಿರುಚಿ, ಅಭಿಲಾಷೆ, ಅಭಿಪ್ರಾಯಗಳ ಜನರನ್ನು ಒಂದೆಡೆ ಸೇರಿಸಿ ಎಲ್ಲರನ್ನೂ ಸಂತೃಪ್ತಿಪಡಿಸುವ ಸುಂದರ ಕಲೆ ಇದಾಗಿದೆ. ನಮ್ಮ ಕಣ್ಮನಗಳಿಗೆ ಸಂತಸವನ್ನುಂಟು ಮಾಡುವ ಉಳಿದೆಲ್ಲ ಕಲೆಗಳಿಗಿಂತಲೂ ಇದು ವಿಶಿಷ್ಟ ಕಲೆಯಾಗಿದೆ. ಬಯಲಾಟ ಒಂದು ಕಲೆಯಲ್ಲ, ಅನೇಕ ಕಲೆಗಳ ಬಲೆ, ಅದರಲ್ಲಿ ವಿವಿಧ ಕಲೆಗಳು ಹಾಸು ಹೊಕ್ಕಾಗಿ ಹೆಣೆದುಕೊಂಡಿವೆ; ಒಂದನ್ನು ಬಿಟ್ಟು ಇನ್ನೊಂದಿಲ್ಲ ಎನ್ನುವಂತೆ ಸಮರಸ ಹೊಂದಿವೆ. ಹಾಡು ಕುಣಿತ, ಅಭಿನಯ, ವೇಷಗಾರಿಕೆ ಮುಂತಾದವುಗಳಿಂದ ಸಾಗುವ ಸಮಿಶ್ರ ಕಲೆ ಇದಾಗಿದೆ. ಹೀಗಾಗಿ ಭಿನ್ನ ಕಲಾಭಿರುಚಿಯುಳ್ಳ ಸಹೃದಯರ ಮನವನ್ನಾಕರ್ಷಿಸುವ ರಸಕಳಿಕೆಯಾಗಿದೆ. ಜನಪದ ಮನವನ್ನು ಬಲು ಮೋಹಕವಾಗಿ ಇವು ಸೆರೆ ಹಿಡಿದಿವೆ. ಅವರಿಗೆ ಮನರಂಜನೆ ನೀಡುವ ಏಕೈಕ ಸಾಧನವಾಗಿ ಪ್ರಚಾರದಲ್ಲಿವೆ. ಸುಗ್ಗಿಯ ಶ್ರಮವನ್ನು ದಣಿದ ಮನವನ್ನು ಪರಿಹರಿಸುತ್ತ ನಕ್ಕು ನಲಿಯುವ, ಸಂತಸಪಡುವ ಸದಾವಕಾಶ ಇದಾಗಿದೆ. ಮನರಂಜನೆಯ ಜೊತೆಗೆ ನೀತಿಯನ್ನೂ ಬೀರುತ್ತ ಗ್ರಾಮೀಣರ ಬದುಕನ್ನು ಹಸನುಗೊಳಿಸಲು, ಒಳ್ಳೆಯ ಸಂಸ್ಕೃತಿಯನ್ನು ಮೂಡಿಸಲು ಇವು ತುಂಬಾ ಶ್ರಮವಹಿಸಿವೆ. ಪಾಠಶಾಲೆಗಳಿರದ ಪ್ರಾಚೀನ ಕಾಲದಲ್ಲಿ ಜನಪದರ ನೈತಿಕ, ಶೈಕ್ಷಣಿಕ, ಸಾಂಸ್ಕೃತಿಕ ಬದುಕು ವಿಕಾಸವಾದುದು ಇವುಗಳ ಮೂಲಕವೇ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ನೈತಿಕ ಮುಂತಾದ ಮೌಲ್ಯಗಳನ್ನೆಲ್ಲ ಅವರು ಬಯಲಾಟ ಕಥೆಗಳನ್ನು ಕೇಳಿ–ನೋಡಿ ತಿಳಿದುಕೊಂಡಿದ್ದಾರೆ. ಅವುಗಳಲ್ಲಿ ಕಾಳಗದ ಕಥೆಗಳು, ಕಲ್ಯಾಣ ಕಥೆಗಳು, ಪುರಾಣದ ಕಥೆಗಳು ಮತ್ತು ಕುಡುತಿನಿ ನರಸಿಂಗರಾಯನ ಬಯಲಾಟದ ಕಥೆಗಳು.

ಮೇಲಿನ ಬಯಲಾಟ ಕಥೆಗಳು ವಸ್ತು ದೃಷ್ಟಿಯಿಂದ ಮಾತ್ರವಲ್ಲ ಭಾಷೆ, ಶೈಲಿಗಳ ದೃಷ್ಟಿಯಿಂದಲೂ ಗಮನಾರ್ಹವಾಗಿವೆ. ಈ ಸಂಪುಟವು ಬಳ್ಳಾರಿ ಜಿಲ್ಲೆಯ ಪ್ರಖ್ಯಾತ ಬಯಲಾಟ ಕವಿ ಕುಡುತಿನಿ ನರಸಿಂಗರಾಯನ ಎರಡು ಬಯಲಾಟ ಕಥೆಗಳನ್ನು ಒಳಗೊಂಡಿವೆ.

ದೇವಾಸುರ ಕಾಳಗದ ಕಥೆಗಳು ಮಾನವ ಸಂಸ್ಕೃತಿಯ ವಿಕಾಸವಾಗದೇ ಇರುವ ಇಲ್ಲವೇ ಸಂಧಿಕಾಲದ ಪ್ರಸಂಗಗಳನ್ನು ಚಿತ್ರಿಸುತ್ತವೆ. ಮಾನವತೆ, ಅರೆದೈವತ್ವ ಇಲ್ಲವೇ

ಅರೆಮಾನವತ್ವ ಇವುಗಳ ಚಿತ್ರಣವನ್ನು ಸಹ ಇಲ್ಲಿ ಕಾಣುತ್ತೇವೆ. ರಕ್ಕಸರು ತಪಸ್ಸು, ಯಜ್ಞ ಯಾಗಾದಿಗಳನ್ನು ಮಾಡಿ ದೇವತೆಗಳನ್ನು ಗೆಲ್ಲುತ್ತಿದ್ದರು. ಆದರೆ ಅಪ್ಪೊತ್ತಿಗಾಗಲೇ ದೈವತ್ವವನ್ನು ಸಿದ್ಧಿಸಿಕೊಂಡು ಬಲಿಷ್ಟರಾದ ಮಾನವರು ಅದನ್ನೊಂದು ಉನ್ನತ ಪದವಿ ಎಂದು ಭಾವಿಸಿ ಆ ಅಂತಸ್ತು ತಮ್ಮ ಕೆಳಗಿನ ಜನಕ್ಕೆ ಬಂದರೆ ತಮ್ಮ ಸ್ಥಾನಮಾನಗಳಿಗೆ ಚ್ಯುತಿ ಬರುವುದಾಗಿ ತಿಳಿದಿದ್ದರು. ರಕ್ಕಸರ ತಪಸ್ಸುಗಳ ವಿಫಲತೆಗೆ ಹಲವಾರು ಬಗೆಯ ತಂತ್ರಗಳಿಂದ ದೇವತೆಗಳು ಅವರನ್ನು ಆ ಪದವಿಗೆ ಬಾರದಂತೆ ನೋಡಿಕೊಂಡರು. ಒಟ್ಟು ಮಾನವ ಸಂಸ್ಕೃತಿಯ ವಿಕಾಸವಾಗದಿರುವ ಸಂಘರ್ಷಗಳ ಈ ದೃಷ್ಟಿಯಿಂದ ಇಲ್ಲಿ ಪ್ರತಿಧ್ವನಿತ ವಾಗುತ್ತವೆ. ಕಾಳಗ ನಡೆಯುವದಕ್ಕೆ ಹಲವೊಂದರ ಪ್ರೇರಣೆಯಿರುತ್ತದೆ. ಸೋಲು, ಅಪಮಾನ, ಅಸಹಾಯಕತೆಗಳ ವಿರುದ್ಧ ಸೆಣಸಾಡುವ ಛಲ ಮನುಷ್ಯನಿಗೆ ಸಹಜವಾಗಿರುತ್ತದೆ. ಈ ಸಂಘರ್ಷದಿಂದ ವ್ಯಕ್ತಿ ತನ್ನ ಅಸ್ತಿತ್ವವನ್ನು ನೆಲೆಗೊಳಿಸುತ್ತಾನೆ. ಕಾಳಗದ ಪ್ರಸಂಗಗಳಿಗೆ ಈ ದೃಷ್ಟಿಯಿಂದ ಬಯಲಾಟ ಕಥೆಗಳು ಪ್ರಾಧಾನ್ಯತೆಯನ್ನು ಕೊಟ್ಟಿವೆ. ಕಾಳಗದಲ್ಲಿ ಹೋರಾಟ ನಡೆಸುವುದು ಒಂದೇ ನೀತಿ. ಇಲ್ಲಿ ಮತ್ತೊಂದು ಮೌಲ್ಯ ಇರುವುದಿಲ್ಲ. ಈ ಮೌಲ್ಯ ರಕ್ಷಣೆಯಲ್ಲಿ ಸ್ವಜನ ಅನ್ಯಜನವಾಗಿ, ಅನ್ಯಜನ ಸ್ವಜನರಾಗಿ ಒಮ್ಮೊಮ್ಮೆ ವಿಲಕ್ಷಣ ವಾದ ಪರಿಸರ ನಿರ್ಮಿತವಾಗಬಹುದು. 'ರಾಮಾಂಜನೇಯ ಕಾಳಗ'ದಲ್ಲಿ ರಾಮನಿಗೆ ಪರಮಭಕ್ತನಾದ ಆಂಜನೇಯ ತಾಯಿ ಅಂಜನಾದೇವಿಗೆ ಕೊಟ್ಟ ವಚನದಂತೆ ಗುರುವಿನೊಡನೆ ಹೋರಾಟದ ಕಣಕ್ಕೆ ಇಳಿಯುತ್ತಾನೆ. 'ಅಭಿಮನ್ಯು ಕಾಳಗ'ದಲ್ಲಿ ಬಾಲಕನಾದರೂ ಸಿಂಹದ ಮರಿಯಂತೆ ಯುದ್ಧ ಕಣಕ್ಕೆ ನುಗ್ಗುತ್ತಾನೆ. ಇಲ್ಲಿ ಅವನನ್ನು ಸೋಲಿಸಲು ನಡೆಸಿದ ತಂತ್ರ, ಚಕ್ರವ್ಯೂಹ ಮುಂತಾದವು ಎಷ್ಟೇ ಘನವಾಗಿದ್ದರೂ ಅಭಿಮನ್ಯು ಲಘು ಎನ್ನಿಸುವುದಿಲ್ಲ. ಇಲ್ಲಿನ ಕಾಳಗದ ನೀತಿಯಲ್ಲಿ ವಯಸ್ಸು ಒಂದು ಮಾನದಂಡವಲ್ಲ, ಉತ್ಸಾಹವೇ ಒಂದು ಮಾನದಂಡ ಎಂಬ ಧ್ವನಿಯಿದೆ. ಒಂದರಲ್ಲಿ ಕ್ರಿಯೆ ಇನ್ನೊಂದರಲ್ಲಿ ಅದರ ಪರಿಣಾಮ ಎಂದಾಗಿ ಇವನ್ನು ತಿಳಿಯಬಹುದು. ಬಯಲಾಟ ಕಥೆಗಳಲ್ಲಿ ಇಂತಹ ವಿಜಯ ಪ್ರಸಂಗಗಳನ್ನು ಸಾಕುವ ಕಥೆಗಳೆಂದರೆ ಪಾರ್ಥ ವಿಜಯ, ಅಭಿಮನ್ಯು ಕಾಳಗ ಮುಂತಾದವು.

## ಕಲ್ಯಾಣದ ಕಥೆಗಳು :

ಕಲ್ಯಾಣದ ಕಥೆಗಳಲ್ಲಿ ನಾಯಕ–ನಾಯಕಿ ಪ್ರಧಾನವಾದ ಬಯಲಾಟ ಕಥೆಗಳಲ್ಲಿ ಇವರಿಬ್ಬರ ಸಮಾಗಮಕ್ಕೆ ಮಹತ್ವವಿರುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿಗೆ ಸಾಮಾಜಿಕ ವಾಗಿ ಪ್ರತಿಷ್ಠೆ ಗೌರವಗಳು ಪ್ರಾಪ್ತವಾಗುವುದು ತನಗಿಷ್ಟವಾದ ವ್ಯಕ್ತಿಯನ್ನು ಕೈಹಿಡಿದು ಅವನ ಆದರ್ಶಗಳಲ್ಲಿ ಸಮಬಾಳು ಸಮ ಪಾಲಾಗಿ ಜೀವನ ಸವೆಸುವುದರಲ್ಲಿದೆ. ಕಲ್ಯಾಣದ ಕಥೆಗಳು ಆಯಾ ದೇಶ, ಸಮಾಜ ಸಂಸ್ಕೃತಿಗೆ ಅನುಗುಣವಾಗಿ ಬೇರೆ ಬೇರೆಯಾಗಿರಬಹುದು.

ಪಾಶ್ಚಾತ್ಯ ವೀರ ಕಥೆಗಳಲ್ಲಿ ಒಂದು ಹೆಣ್ಣನ್ನು ಯುದ್ಧದಲ್ಲಿ ಗೆಲ್ಲುವುದು, ಅವಳನ್ನು ವಿರೋಧಿ ನಾಯಕನಿಂದ ಜಯಿಸಿ ಸಂಪಾದಿಸುವುದು ಒಂದು ಬಗೆಯ ಕಲ್ಯಾಣವೇ ಆಗಿರಬಹುದು. ಆದರೆ ಭಾರತೀಯ ದೃಷ್ಟಿಯಲ್ಲಿ ಅದು ಕಲ್ಯಾಣವಲ್ಲ. ಹೆಣ್ಣಿನ ಜೀವನದಲ್ಲಿ ವೈವಾಹಿಕ ಪ್ರಸಂಗದಿಂದ ಒದಗಿ ಬರುವ ಕಲ್ಯಾಣವೇ ಇಲ್ಲಿ ಮುಖ್ಯ. ಇಲ್ಲಿ ಇಂತಹ ಮಂಗಳ ಪ್ರಸಂಗದಲ್ಲಿ ಭಾಗಿಯಾಗುವ ನಾಯಕಿಗೆ ಅವಳದೇ ಆದ ಗುಣಶೀಲ ಸ್ವಭಾವಗಳಿಂದ ಕೂಡಿದ ವ್ಯಕ್ತಿತ್ವವಿರುತ್ತದೆ. ಆದರೆ ಈ ವ್ಯಕ್ತಿತ್ವದ ಉತ್ಕರ್ಷವನ್ನು ಅವಳ ಕಲ್ಯಾಣ ಪ್ರಸಂಗಗಳಲ್ಲಿ ಜೋಡಿಸಿರುವುದು ಬಯಲಾಟ ಕಥೆಗಳ ಒಂದು ಪ್ರತ್ಯೇಕ ವರ್ಗೀಕರಣಕ್ಕೆ ಕಾರಣವಾಗಿದೆ. 'ಕಲ್ಯಾಣ' ಕೇವಲ ವೈವಾಹಿಕ ಜೀವನದ ಪ್ರಸಂಗ ಮಾತ್ರವಾಗಿರದೆ ನಾಯಕಿಯ ಜೀವನದಲ್ಲಿ ಉಂಟಾಗುವ ಶುಭದ, ಮಂಗಳದ ಘಳಿಗೆಯೂ ಆಗಿರಬಲ್ಲದು. ಇದರಿಂದ ಕಲ್ಯಾಣ ಎಂಬುದು ಕೇವಲ ನಾಯಕ–ನಾಯಕಿಯರ ಸಮಾಗಮ ಮಿಲನಕ್ಕೆ ಮಾತ್ರ ಸೀಮಿತವಾಗಿ ತೋರುವುದಿಲ್ಲ.

ಕಲ್ಯಾಣದ ಕಥೆಗಳನ್ನು ಹೀಗೆ ಪರ್ಯಾಲೋಚಿಸಬಹುದು. ಗಿರಿಜೆ–ಶಿವನನ್ನು ಸಂಪಾದಿಸುವಲ್ಲಿ ಅವಳ ಸಂಯಮ, ತ್ಯಾಗ, ತಪಸ್ಸು, ಸಾತ್ವಿಕ ಛಲ ಮುಖ್ಯವಾಗುತ್ತವೆ, ಜಗತ್ತಿಗೆ ಒಡೆಯನಾದ ಈಶ್ವರನ ಅರ್ಧಾಂಗಿಯಾಗುವುದು ಗಿರಿಜೆಯ ಜೀವನದಲ್ಲಿ ಒಂದು ದೊಡ್ಡ ಪ್ರತೀಕವಾಗಿ ನಿಲ್ಲುತ್ತದೆ. ಇಲ್ಲಿ ಶಿವನು ಅವಳನ್ನು ವರಿಸುವಲ್ಲಿ ಅವಳಿಗೆ ಕಲ್ಯಾಣವನ್ನುಂಟು ಮಾಡುತ್ತಾನೆ ಎಂಬ ಭಾವನೆಗಿಂತ ಮಿಗಿಲಾಗಿ ಸೃಷ್ಟಿಗೆ ಮಾತಾಪಿತೃಗಳಾದ ಶಕ್ತಿ–ಶಿವಗಳ ಮಿಲನದಲ್ಲಿ ಜಗತ್ತಿಗೇ ಮಂಗಳವನ್ನು ತರುವ ಸಂಕೇತವಾಗಿ ಗಿರಿಜಾಕಲ್ಯಾಣದ ಕಥೆ ವೇದ್ಯವಾಗುತ್ತದೆ. ನಾಯಕಿಗೆ ಪ್ರಾಧಾನ್ಯತೆಯಿರುವುದರಿಂದ ಇದನ್ನು ಗಿರಿಜಾ ಕಲ್ಯಾಣವೆಂದೇ ಬಯಲಾಟ ಕವಿಗಳು ಪ್ರಚಾರ ಪಡಿಸಿದ್ದಾರೆ. ಕೆಲವೊಂದು ಕಥೆಗಳಲ್ಲಿ ಕಲ್ಯಾಣ ನಾಯಕಿ–ನಾಯಕರ ಸಮಾಗಮದಲ್ಲಿ ಮಾತ್ರ ವಿರಮಿಸುವುದೂ ಉಂಟು— ನಿದರ್ಶನಕ್ಕೆ ಶಶಿರೇಖಾ ಪರಿಣಯ, ಲಕ್ಷಣೇ ಕಲ್ಯಾಣ — ಇವು ಅವರ ಜೀವನದ ಸ್ವಯಂವರ ಇಲ್ಲವೇ ಅವರ ವಿವಾಹಿಕ ಗುರಿಯನ್ನು ಮಾತ್ರ ಸಾಧಿಸುತ್ತವೆ. ಇಂತಹ ಕಥೆಗಳಲ್ಲಿ ಲೌಕಿಕ ಜೀವನದಿಂದ ಹೊರತಾದ ಪುರುಷಾರ್ಥಗಳೇನೂ ಇರುವುದಿಲ್ಲ. 'ಗಿರಿಜಾ ಕಲ್ಯಾಣ'ದ ಕಥೆ ಬಯಲಾಟಕ್ಕೆ ವಸ್ತುವಾಗಿರುವುದು ಒಂದು ಜನಪದ ಮೌಖಿಕ ಪರಂಪರೆಯನ್ನೆ ಹೋಲುತ್ತದೆ. ಇದು ಪಾಶ್ಚಾತ್ಯ ಗ್ರೀಕ್ ಕಥೆಗಳಲ್ಲಿ ಬರುವಂತೆ ಪ್ರತಿ ನಾಯಕನು ನಾಯಕಿಯನ್ನು ಹಾರಿಸಿಕೊಂಡು ಹೋದ ಪ್ರಸಂಗದಲ್ಲಿ ನಾಯಕನು ಹೋರಾಟ ಮಾಡಿ ಅವಳನ್ನು ಗೆದ್ದು ತರುವ ಮಾದರಿಯನ್ನು ಹೋಲುತ್ತದೆ.

**ಪುರಾಣದ ಕಥೆಗಳು :**

'ಪುರಾಣ' ಮಾನವ ಶಕ್ತಿಯಿಂದ ಮಿಗಿಲಾದ ದೈವೀ ಶಕ್ತಿ ನಿಯಂತ್ರಿಸುವ ಮತ್ತು ಆ ಮೂಲಕ ವ್ಯವಸ್ಥೆಯನ್ನು ನೆಲೆಗೊಳಿಸುವ ಉದ್ದೇಶವನ್ನು ಹೊಂದಿರುತ್ತದೆ. ಲೌಕಿಕ ವ್ಯಕ್ತಿಗಳು ಕಟ್ಟಿಕೊಳ್ಳುವ ನಿಯಮಗಳು ಈ ಲೋಕಕ್ಕೆ ಮಾತ್ರ ಬದ್ಧವಾಗಿರುತ್ತವೆ. ಹೀಗೆ ಪರಿಮಿತಿಗೆ ಅಸಾಧ್ಯವಾಗಿ ತೋರುವ ಅಘಟಿತ ಘಟನೆ ಲೀಲೆಯಾಗುತ್ತದೆ. ಪುರಾಣಗಳ ಹಿನ್ನೆಲೆಯಲ್ಲಿ ಚಿತ್ರಿತರಾದ ದೈವೀ ಪುರುಷರಲ್ಲಿ ಇಂತಹ ಒಂದು ಅದ್ಭುತ ಲೀಲಾತ್ಮಕ ಶಕ್ತಿಯನ್ನು ನಾವು ಕಾಣುತ್ತೇವೆ. ಶೈವ–ವೈಷ್ಣವ ಭಾಗವತಾದಿಗಳಲ್ಲಿ ಬರುವ ಶಿವಲೀಲೆ ವಿಷ್ಣುಲೀಲೆ ದಶವತಾರ ಎಲ್ಲವೂ ಒಂದು ಅಧಿದೈವದ ಪ್ರೇರಣೆಯಿಂದ ನಡೆದವುಗಳಾಗಿವೆ. ಇಲ್ಲಿ ಅವರವರ ಮತಾಧಿಕ್ಯವೂ ಕಾಣಿಸಿಕೊಳ್ಳುತ್ತದೆ. ದೈವತ್ವದಲ್ಲಿ ನಂಬಿಕೆಯುಳ್ಳ ಜನತೆ ದೈವೀ ಪುರುಷರ ಲೀಲೆಗಳನ್ನು ಮೆಚ್ಚಿಕೊಂಡಿರುವುದು ಕಂಡುಬರುತ್ತದೆ. ಈ ಜನಪದ ನಂಬುಗೆಗಳನ್ನು ಆಧರಿಸಿ ಬಯಲಾಟ ಕಥೆಗಳಲ್ಲಿ ಪುರಾಣಗಳನ್ನು ವಸ್ತುವಾಗಿರಿಸಿಕೊಂಡಿರುವುದುಂಟು. ಈ ಪುರಾಣದಿಂದ ನಡೆಯುವ ಘಟನೆ ಕ್ರಿಯಾದಿಗಳನ್ನು ನಾವು ಸಂಹಾರದಲ್ಲಿಯೂ ಕಾಣುತ್ತೇವೆ. ದಕ್ಷಸಂಹಾರ ಶಿವನ ದಕ್ಷಾಧ್ವರ ಲೀಲೆಯಾಗಿದೆ. ತಾರಕಾಕ್ಷ ಸಂಹಾರವು ತ್ರಿಪುರ ದಹನ ಲೀಲೆಯಾಗಿದೆ. ಪ್ರಹ್ಲಾದನ ಭಕ್ತಿಯ ಅಧಿಕ್ಯ ವಿಷ್ಣುವಿನ ನರಸಿಂಹಾವತಾರದ ಲೀಲೆಯಾಗಿದೆ. ಪುರುಷ ದೈವಗಳ ಮೇಲೆ ಇರುವಂತೆಯೇ ಸ್ತ್ರೀ ದೈವಗಳ ಅಧಿಕ್ಯವೂ ಬಯಲಾಟ ವಸ್ತುವಿಗೆ ಪ್ರೇರಣೆ ನೀಡಿದೆ. ದೇವಿಕಥೆ ಇಲ್ಲಿ ಉಲ್ಲೇಖನೀಯ. ದೈತ್ಯರ ಸಂಹಾರಕ್ಕಾಗಿ ದೇವಿ ಒಂದೊಂದು ರೂಪತೊಟ್ಟು ದೈತ್ಯರ ಮರ್ದಿಸುವುದು ಆ ಮೂಲಕ ಶಾಂತಿ ಸಮತೆಗಳನ್ನು ಲೋಕಕ್ಕೆ ನೀಡುವುದು ಇಲ್ಲಿ ಪ್ರಕಟವಾಗುತ್ತದೆ. ದೇವಾರ್ಚನೆಯಲ್ಲಿ ಪುರುಷ ದೈವಗಳನ್ನು ಪೂಜಿಸುವಲ್ಲಿ ತೋರದ ಮಡಿವಂತಿಕೆ ಸಂಯಮ ಹಾಗೂ ವಿದ್ಯುಕ್ತ ಉಪಾಸನೆ ಇಲ್ಲವೇ ವ್ರತಾಚರಣೆ ಎಂಬಂತೆ ದೇವೀ ಆಟದ ಪ್ರಸಂಗವಿರುತ್ತದೆ. ಭಕ್ತಿ ಮಾರ್ಗದಲ್ಲಿ ತಾಂತ್ರಿಕ ಆಚರಣೆಗಳು ಬೆಳೆದ ಕಾಲದಲ್ಲಿ ದೇವೀ ಕಥೆಗೆ ಮಹತ್ವ ಬಂದಂತೆ ಕಾಣುತ್ತದೆ.

ದಕ್ಷನು ಈಶ್ವರನಲ್ಲಿ ಬಂದಾಗ 'ಸರ್ವದೇವಗಣ' ಶಿವಯೋಗದಲ್ಲಿದ್ದುದರಿಂದ ಯಾರು ದಕ್ಷನ ಕಡೆ ದೃಷ್ಟಿಹರಿಸದಿದ್ದಾಗ ಆತನಿಗೆ ಸಿಟ್ಟು ಬರುತ್ತದೆ. 'ಯಲೈ ಸಾರಥಿ ಇಂಥ ತಮೋ ಗುಣ ದೇವತೆ ಯೀ ಲೋಕದಲ್ಲಿ ಉಂಟೆ? ಮಾವ ಬಂದನೆಂಬ ಭಾವಾರ್ಥ ಸ್ವಲ್ಪಾದರೂ ಇವನಿಗೆ ಹುಟ್ಟಲಿಲ್ಲ. ನನ್ನ ಕಡೆಗೆ ನೋಡದೆ, ಮಾತಾಡದೇ ಬೆಲ್ಲವಂ ಒಡೆವ ಗುಂಡುಕಲ್ಲಿನಂತೆ ಕೆಟ್ಟ ಕಣ್ಣು ಮಾಡಿಕೊಂಡು ಹೆಂಡತಿಯರ ಎಡದೊಡೆಯ ಮೇಲೆ ಕುಳ್ಳಿರಿಸಿಕೊಂಡು ಮೌನಭಾವದಿಂದಿರುವ ಈ ಶಿವನ ಮನೆಯಲ್ಲಿ ನಾನೇನು ಇರಲಿಕ್ಕೆ

ಬಂದವನಲ್ಲ, ಇವನ ಭಿಕ್ಷೆಯ ಕೂಳಿಗೆ ಕೈ ಒಡ್ಡಲಿಕ್ಕೆ ಬಂದಿರುವೆನೆ? ಇಂಥ ಮೂಢನಾಗಲಿಕ್ಕೇ ಸ್ಮಶಾನದಲ್ಲಿ ವಾಸ ಮಾಡುವನು. ಇವನಿಗೆ ಕೊಡುವ ಕಬಳಮಂ ದಾವ ದೇವತೆಗಳಾದರೂ ತೆಗೆದುಕೊಳ್ಳಲಿ' ಎಂದು ಕೋಪಗೊಂಡು ಹಾಗೆ ಹಿಂತಿರುಗುತ್ತಾನೆ.

## ಕುಡುತಿನಿ ನರಸಿಂಗರಾಯನ ಬಯಲಾಟ ಕಥೆಗಳು

### ದ್ರೌಪದಿ ವಸ್ತ್ರಾಪಹರಣ ಅರ್ಥಾತ್ ದುಶ್ಯಾಸನ ಕಥೆ :

ಮಹಾಭಾರತ ವನ್ನಾಧರಿಸಿ ಎಷ್ಟೋ ಅಖ್ಯಾಯಿಕೆ, ಪ್ರಸಂಗ ಕಾವ್ಯ, ನಾಟಕಾದಿಗಳು ಹುಟ್ಟಿಕೊಂಡಿದ್ದರೂ ದುಶ್ಯಾಸನ ಕಥೆ ಬಯಲಾಟದ ವಸ್ತುವಾಗಿರುವುದು ಒಂದು ವಿಶೇಷ. ಪಾಂಡವರ ರಾಜಸೂಯ ಯಾಗದ ಸಂದರ್ಭದಲ್ಲಿ ದ್ರೌಪದಿಯಿಂದ ಅವಮಾನಿತನಾದ ದುರ್ಯೋಧನ ಅದಕ್ಕೆ ಪ್ರತ್ಯುಪಕೃತಿಯಾಗಿ ಪಾಂಡವರೊಡನೆ ನೀತಿಯಲ್ಲಿ ಜೂಜಾಟವಾಡಿ ಗೆಲ್ಲುತ್ತಾನೆ. ತುಂಬಿದ ಸಭೆಯಲ್ಲಿ ದುಶ್ಯಾಸನನಿಂದ ದ್ರೌಪದಿಯ ವಸ್ತ್ರಾಪಹರಣ ನಡೆಯುತ್ತದೆ. ಆದರೆ ಭೀಮನು ದುಶ್ಯಾಸನನ್ನು ವಧೆಗೈಯ್ದು ದ್ರೌಪದಿಯ ತಲೆಗೂದಲನ್ನು ಕಟ್ಟಿ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸುವವರೆಗಿನ ಕಥಾ ಭಾಗವನ್ನು ಈ ಬಯಲಾಟದ ವಸ್ತುವನ್ನಾಗಿ ಇಲ್ಲಿ ಸ್ವೀಕರಿಸಲಾಗಿದೆ. ಆದರೆ ಮಹಾಭಾರತದಲ್ಲಿ ಸಭಾಪರ್ವ, ಕರ್ಣಪರ್ವದಲ್ಲಿನ ಭಾಗವು ಈ ಬಯಲಾಟದ ವಸ್ತುವಾಗಿದೆ. ರಾಜಸೂಯಯಾಗಕ್ಕೆ ಹೋಗಿ ಬಂದ ದುರ್ಯೋಧನ ಭಿನ್ನವಾಗಿ ಚಿಂತಿಸುವ ಸಂದರ್ಭದಿಂದ 'ದುಶ್ಯಾಸನ ಕಥೆ' ಆರಂಭವಾಗುತ್ತದೆ. ಈ ಕಥೆಯು ಕೆಲವು ಪ್ರಸಂಗಗಳನ್ನು ಉಜ್ವಲವಾಗಿಸುತ್ತದೆ.

೧. ಕ್ಷಿತಿಪತಿ ಎಂದೆನಿಸಿ ಸಾಮಾನ್ಯಳಾದ ಸತಿಗೆ ಮಾನವನೊಪ್ಪಿಸಿ ಗತಿಗೆಟ್ಟು ನಾಲ್ವರ ಮುಂದೆ ಬದುಕುವುದೆಂತು ಎಂಬ ವೇದನೆ.
೨. ಜೂಜಾಟದ ದುಷ್ಪರಿಣಾಮ
೩. ತುಂಬಿದ ಸಭೆಯಲ್ಲಿ ದ್ರೌಪದಿಯ ಸೀರೆ ಸೆಳೆಯುವುದು.
೪. ಮಾನನಷ್ಟ ಮಾಡಿದ ದುಶ್ಯಾಸನನ ಅವಸಾನ.
೫. ಭೀಮನು ದ್ರೌಪದಿಯ ತಲೆಗೂದಲನ್ನು ಕಟ್ಟಿ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದು.

ಮಹಾಭಾರತದ ಮೂಲ ಕಥೆಗೆ ಭಿನ್ನವಾದ ಯಾವ ಘಟನೆಯೂ ಇಲ್ಲಿಲ್ಲ. ಆದರೆ ಮಾನವಂತನಾದ ದುರ್ಯೋಧನ ಒಂದು ಹೆಣ್ಣಿಗೆ ಮಾನವನೊಪ್ಪಿಸಿ ಗತಿಗೆಟ್ಟು ನಾಲ್ವರ ಮುಂದೆ ಬದುಕುವುದೆಂತು ಎಂದು ಚಿಂತಿಸುವುದು, ಅದಕ್ಕೆ ಪ್ರತ್ಯುಪಕೃತಿಯಾಗಿ ದ್ರೌಪದಿಯ

ಸೀರೆ ಸೆಳೆಸುವುದು, ಸೀರೆ ಸೆಳೆದ ದುಶ್ಶಾಸನ ವಧೆ ಮಾಡುವುದು ಇಲ್ಲಿನ ಮುಖ್ಯ ಅಂಶಗಳು. ಮಾನ, ಅಪಮಾನ, ಹರಣಗಳ ನಡುವೆ ಛಲ–ಸ್ವಾಭಿಮಾನಗಳೇ ಪ್ರಮುಖ ಅಂಶಗಳಾಗಿ ಈ ಕೃತಿಯಲ್ಲಿ ಮೂಡಿಬಂದಿವೆ. ನಮ್ಮ ಸಂಸ್ಕೃತಿಯಲ್ಲಿ ಹೆಣ್ಣಿಗೆ ಮಾನ ಮುಚ್ಚಿಕೊಳ್ಳಲು ಇರುವ ವಸ್ತ್ರ ಸೀರೆ. ದುಶ್ಶಾಸನ ಇದನ್ನು ಸೆಳೆಯುವುದಕ್ಕೆ ಮುಂದಾಗುತ್ತಾನೆ. ಇದೊಂದೇ ಅವನನ್ನು ಲೋಕದ ಕಣ್ಣಿಗೆ ಕಾಣಿಸಿದ ಪ್ರಸಂಗ. ಈ ವಸ್ತು ಈ ಆಟದಲ್ಲಿ ಎಷ್ಟು ರೋಚಕ ವಾಗುತ್ತದೆಂದರೆ ದುಶ್ಶಾಸನನಂತಹ ವ್ಯಕ್ತಿಗಳು ಅಬಲೆಯರ ಶೋಷಣೆಗೆ ಈಗಲೂ ಇರುವರೇನೋ ಎನ್ನುವಷ್ಟರ ಮಟ್ಟಿಗೆ ಈ ಪಾತ್ರವನ್ನು ಬದ್ಧವಾಗಿಸುತ್ತದೆ. ಈ ಮಾನಭಂಗಕ್ಕಾಗಿ ಸೊಸಾಡಿದ ದುಶ್ಶಾಸನನ ಅವಸ್ಥೆಯನ್ನು ಲೋಕ ತನ್ನ ಕಣ್ಣೆದುರಲ್ಲೇ ಕಾಣಬೇಕು. ಅದಕ್ಕಾಗಿ ದುಶ್ಶಾಸನನ ವಧೆ ಈ ಆಟದಲ್ಲಿ ನಡೆಯಲೇಬೇಕು. ಇದು ಜನತೆ ನೇರವಾದ, ನಿರ್ಭಿತೆ ಯಾದ ರೀತಿಯಲ್ಲಿ ಮೌಲ್ಯಗಳನ್ನು ಅರ್ಥಮಾಡಿಕೊಂಡ ಬಗೆ. ಘಟನೆ ಸನ್ನಿವೇಶ ಕ್ರಿಯಾದಿ ಗಳಿಂದ ಪ್ರಸಂಗ ನಾಟಕೀಯವಾಗುವುದನ್ನು ಗುರುತಿಸಿಯೇ ಬಯಲಾಟ ಕವಿಗಳು ಈ ಕಥೆಯನ್ನು ಬೆಳೆಸಿಕೊಂಡಿದ್ದಾರೆ.

**ಕೀಚಕನ ಕಥೆ :**

ಇದು ವಿರಾಟ ಪರ್ವದಿಂದ ಆಧಾರಿತವಾದ ಕಥೆ. ದ್ರೌಪದಿ ಸೈರಂಧ್ರಿಯ ವೇಷದಲ್ಲಿ ಸುದೇಷ್ಣೆಯ ಹತ್ತಿರ ಇದ್ದಾಗ ವಿರಾಟನ ಸೇನಾನಿಯಾಗಿದ್ದ ಸುದೇಷ್ಣೆಯ ತಮ್ಮ ಕೀಚಕನು ಸೈರಂಧ್ರಿಯಲ್ಲಿ ಮೋಹಗೊಳ್ಳುತ್ತಾನೆ. ಕೀಚಕ ನಾಟ್ಯಶಾಲೆಗೆ ಅವಳನ್ನು ಬರಮಾಡಿಕೊಂಡಾಗ ಛದ್ಮವೇಷದಲ್ಲಿ ಸೈರಂಧ್ರಿಯ ವೇಷ ತೊಟ್ಟು ಬಂದ ಭೀಮನಿಂದ ಹತನಾಗುತ್ತಾನೆ. ಈ ವಸ್ತು ಪರಸ್ತ್ರೀ ವ್ಯಾಮೋಹಕ್ಕೊಳಗಾದ ವ್ಯಕ್ತಿಗಳ ಜೀವನ ಸಂಗತಿಗಳನ್ನು ಬಯಲಿಗೆಳೆಯುತ್ತದೆ. ಈ ಕಥೆ ಲೋಕ ಜೀವನ ಸಂಸ್ಪರ್ಶಿಯಾಗುವುದಕ್ಕೆ ಇಲ್ಲಿನ ಪಾತ್ರಗಳು ಶಿಷ್ಟವೆನಿಸದೆ ಲೋಕ ಸಹಜವೆನಿಸುತ್ತದೆ. ಈ ಕಥೆಯಲ್ಲಿ 'ಕೀಚಕನು ಪರಸ್ತ್ರೀ ವ್ಯಾಮೋಹಕ್ಕೆ ಒಳಗಾಗುವುದು'. 'ಕೀಚಕನು ಹತನಾಗುವುದು' ಇವು ಈ ಕೃತಿಯಲ್ಲಿ ಕಂಡುಬರುವ ಮುಖ್ಯಾಂಶಗಳು.

ಪರಸ್ತ್ರೀಯರನ್ನು ಬಯಸುವುದು ಪಾಪ. ದುಶ್ಶಾಸನ, ಕೀಚಕನಂಥವರು ಭೂಮಿಯ ಮೇಲೆ ಬದುಕಬಾರದು, ಗಂಡನಾದವನು ಹೆಣ್ಣಿನ ಮಾನ ರಕ್ಷಿಸಬೇಕು ಎಂಬುದು ಮೇಲಿನ ಕಥೆಗಳ ನೀತಿಯಾಗಿದೆ. ಸುಧನ್ವ ಕಾಳಗ, ಅಭಿಮನ್ಯು ಕಾಳಗ, ಪ್ರಮೀಳಾ ದರ್ಬಾರ್, ಕರ್ಣಾರ್ಜುನರ ಕಾಳಗ— ಇತ್ಯಾದಿ ಬಯಲಾಟ ಕಥೆಗಳಿಗೆ ಯುದ್ಧ ಘಟನೆಗಳನ್ನೊಳ ಗೊಂಡ ದ್ರೋಣ ಪರ್ವ, ಕರ್ಣ ಪರ್ವ, ಅಶ್ವಮೇಧ ಪರ್ವಗಳೇ ಮತ್ತು ಜೈಮಿನಿಭಾರತ ಆಕರಗಳಾಗಿವೆ. ಪರಸ್ಪರ ಹೋರಾಟ ಸಾಹಸಗಳ ನಡುವೆ ವೀರಮರಣ, ಸತ್ತವರಿಗಾಗಿ ಇದ್ದವರು ಪ್ರಲಾಪಿಸುವುದು ಇಲ್ಲಿನ ವಸ್ತುವಾಗಿದೆ.

ಬಯಲಾಟಗಳಲ್ಲಿ ಭಾರತದ ಇತರ ಕಥೆಗಳಲ್ಲಾಗಲಿ, ಕರ್ನಾಟಕದಲ್ಲಾಗಲೀ ಸಾಮಾನ್ಯವಾಗಿ ಒಂದೇ ಬಗೆಯ ಕಥೆಗಳು ಪ್ರಸಾರದಲ್ಲಿವೆ. ಮುಖ್ಯವಾಗಿ ರಾಮಾಯಣ, ಮಹಾಭಾರತದಿಂದಾಯ್ದ ಆಖ್ಯಾನ ಪ್ರಸಂಗಗಳನ್ನೇ ಭಾರತದ ಜನಪದ ರಂಗ ಪ್ರಯೋಗಗಳಲ್ಲಿ ನಾವು ಕಾಣುತ್ತೇವೆ. ಇದಕ್ಕೆ ನಮ್ಮ ಜನತೆಯ ಮೌಲಿಕ ಧೋರಣೆಗಳು ಕಾರಣವಾಗಿದ್ದರೆ ಬಯಲಾಟ ಕಥೆಗಳ ಸ್ವರೂಪ ಇನ್ನೊಂದು ಕಾರಣವಾಗಿದೆ. ನಿದರ್ಶನಕ್ಕೆ ಮಹಾಭಾರತವನ್ನು ಧೋರಣೆಯ ದೃಷ್ಟಿಯಿಂದ ಇಲ್ಲಿ ಹೇಳಬಹುದಾದರೆ ವೈದಿಕ ಪರಂಪರೆಯಲ್ಲಿ ಈ ಕೃತಿ ಪಂಚಮವೇದ, ಅದು ಪಾರಾಯಣ ಯೋಗ್ಯವಾದ ಕೃತಿ. ಇದು ಶಿಷ್ಟ ಜನಪದ ಸಂಸ್ಕೃತಿಯಲ್ಲಿ ಮಹಾಭಾರತದ ಧೋರಣೆಯನ್ನು ಹೆಚ್ಚಿಸಲು ಕಾರಣವಾಗಿದೆ. ಆದರೆ ಜನಸಾಮಾನ್ಯರಲ್ಲಿ ಇಡೀ ಕೃತಿಗೆ ಮಹತ್ವವಿಲ್ಲ. ಇಲ್ಲಿನ ಆಖ್ಯಾಯಿಕೆಗಳು ಲೋಕಜೀವನ ಪ್ರಸಂಗಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿವೆ. ಇದರಿಂದ ಮಹಾಭಾರತದ ಧೋರಣೆ ಜನಸಾಮಾನ್ಯರಲ್ಲಿ ಲೋಕ ಸಂಸ್ಕೃತಿಯ ಅಂಶಗಳನ್ನು ಮಾತ್ರ ಪ್ರಸಾರಗೊಳಿಸಲು ಕಾರಣವಾಗಿದೆ. ಅದರಂತೆಯೇ ಈ ಲೋಕ ಸಂಸ್ಕೃತಿಗೆ ನಿಕಟವಾಗಿರುವ ಉಪಾಖ್ಯಾನಗಳನ್ನು ಹೆಚ್ಚಾಗಿ ಜನಪದ ಆಟಗಳು ಸ್ವೀಕರಿಸಿವೆ. ಭಾರತದ ಇತರ ಕಡೆಗಳಲ್ಲಿನ ಪ್ರಾದೇಶಿಕ ಬಯಲಾಟಗಳಲ್ಲೂ ಸಹ ಇಂತಹದೇ ಆದ ಸಮಾನವಸ್ತು ಸ್ವೀಕರಣಕ್ಕೆ ಕಾರಣವಾಗಿರುವಲ್ಲಿ ಈ ಧೋರಣೆ ಸ್ಪಷ್ಟವಾಗುತ್ತದೆ. ಮಹಾಭಾರತದ ಇಲ್ಲವೆ ರಾಮಾಯಣದ ಕೆಲವು ಪ್ರಸಂಗಗಳು ಮೇಲಿನ ಅಂಶಗಳನ್ನೊಳಗೊಂಡಂತೆ ನಾಟಕೀಯ ಯೋಗ್ಯವಾಗಿ ತೋರಿರುವುದರಿಂದ ಈ ಕಥೆಗಳು ಸ್ವರೂಪದಲ್ಲಿ ಒಂದು ದೃಷ್ಟಿಯಿಂದ ನಾಟಕಗಳೇ ಎಂಬಂತೆ ಜನಪದದಲ್ಲಿ ಪ್ರಸಾರಗೊಂಡಿವೆ. ಪ್ರತಿಭಾನ್ವಿತ ಕವಿಗಳು ಕಾವ್ಯದಲ್ಲಿಯೇ ನಾಟಕೀಯ ಸನ್ನಿವೇಶಗಳನ್ನು ತರುವುದು ಒಂದು ವಿಧವಾದರೆ ಜನಪದದಲ್ಲಿ ತಮ್ಮ ಪ್ರಾದೇಶಿಕ ಸಂಸ್ಕೃತಿ ಹಾಗೂ ದೇಶೀಯ ಕಲೆಗಳ ಮೂಲಕ ಹೀಗೆ ಅಭಿನಯ ಯೋಗ್ಯವಾದ ಕಥೆಗಳನ್ನು ಆರಿಸಿಕೊಂಡು ಬಯಲಾಟ ರಂಗಕಲೆಗೆ ಹಾಗೂ ಅಲ್ಲಿನ ಸಾಹಿತ್ಯಕ್ಕೆ ಮಹತ್ವ ತಂದಿದ್ದಾರೆ.



ಡಾ. ಕೆ. ಆರ್. ದುರ್ಗಾದಾಸ್ ಅವರ ಅಭಿನಂದನಾ ಗ್ರಂಥ 'ಬಯಲು ಹೆಜ್ಜೆ' ಅವರ ಬದುಕು ಬರಹಗಳ ಬಗ್ಗೆ ಹಿರಿಯರು ಮತ್ತು ಆತ್ಮೀಯರ ಭಾವಪೂರ್ಣ ಮತ್ತು ಅರ್ಥಪೂರ್ಣ ಬರಹಗಳಿಂದ ಸಂಪನ್ನವಾಗಿದೆ. ಡಾ.ದುರ್ಗಾದಾಸ್ ಅವರ ವ್ಯಕ್ತಿ ಪರಿಚಯ, ಅವರ ತಜ್ಞತೆಯ ಕ್ಷೇತ್ರವಾದ ಬಯಲಾಟಕ್ಕೆ ಸಂಬಂಧಿಸಿದ ಲೇಖನಗಳು ಮತ್ತು ಅವರ ಅಧ್ಯಯನಾತ್ಮಕ ಕೃತಿಗಳ ಅವಲೋಕನದ ಬರಹಗಳು ಇಲ್ಲಿ ವಿಶಿಷ್ಟವಾಗಿ ಮೇಳೈಸಿವೆ. ತಳಸಂಸ್ಕೃತಿಯ ಒಡಲಿನಿಂದ ಬಂದ ದುರ್ಗಾದಾಸ್ ಅವರು ಬಯಲನ್ನೇ ಆಲಯವನ್ನಾಗಿ ಮಾಡಿಕೊಂಡು ಕನ್ನಡ ಸಾಹಿತ್ಯ ಮತ್ತು ಜಾನಪದ ಕ್ಷೇತ್ರಗಳಲ್ಲಿ ಉತ್ತಮ ಬೆಳೆಗಳನ್ನು ಬೆಳೆಸಿದವರು. ಜನಪದೀಯ ಲೋಕದೃಷ್ಟಿಯಿಂದ ಕರ್ನಾಟಕದ ವಿದ್ವತ್ ಲೋಕದ ಪ್ರೀತಿಗೆ ಪಾತ್ರರಾದವರು. ಪ್ರಗತಿಪರ ಚಿಂತನೆ, ನೇರ ನಡೆನುಡಿ, ಪರಿಶ್ರಮದ ದುಡಿಮೆ, ಸಂಸ್ಥೆಗಳನ್ನು ಕಟ್ಟುವ ಛಲ – ಹೀಗೆ ಕರ್ನಾಟಕದಲ್ಲಿ ತಮ್ಮ ಗಟ್ಟಿಹೆಜ್ಜೆಗಳನ್ನು ಮೂಡಿಸಿದವರು. ದೀರ್ಘಕಾಲದ ಒಡನಾಟವುಳ್ಳ ಡಾ.ಕೆ.ಆರ್.ದುರ್ಗಾದಾಸ್ ಅವರ ಅಭಿನಂದನ ಗ್ರಂಥ 'ಬಯಲು ಹೆಜ್ಜೆ' ಪ್ರಕಟಣೆಯ ಸಂದರ್ಭದಲ್ಲಿ ಅವರನ್ನು ವಿಶ್ವಾಸದಿಂದ ಅಭಿನಂದಿಸಲು ಸಂತೋಷಪಡುತ್ತೇನೆ.

–ಡಾ. ಬಿ. ಎ. ವಿವೇಕ ರೈ

ಮಂಗಳೂರು